ವ್ಯಾವಹಾರಿಕ ನ್ಯಾಯಾಧೀಶರು ಮತ್ತು ಮುಖ್ಯ ನ್ಯಾಯಿಕ ದಂಡಾಧಿಕಾರಿಯವರ
ನ್ಯಾಯಾಲಯ ಮೂಡಬಿದಿರೆ

ಸಿಸಿ ನಂ.295/2018

ಚಾಸಾ- 6, ಫ್ರಾಸಾ -4

| | |
|---|---|
| ಹೆಸರು | ಅಕ್ರಂ ಶೇಕ್ |
| ತಂದೆಯ ಹೆಸರು | ಅಜ್ಮುದ್ದೀನ್ |
| ವಯಸ್ಸು | 51 ವರ್ಷ |
| ಕೆಲಸ | ವ್ಯಾಪಾರ |
| ವಾಸ | ಪ್ರಾಂತ್ಯ ಗ್ರಾಮ , ಮೂಡಬಿದ್ರೆ |
| ಪ್ರಮಾಣೀಕರಿಸಿದ ದಿನಾಂಕ | 14-05-2025 |

ಮುಖ್ಯ ವಿಚಾರಣೆಃ ಮಾನ್ಯ ಸಹಾಯಕ ಸರಕಾರಿ ಅಭಿಯೋಜಕರಿಂದಃ

1. ಆರೋಪಿ ಗೊತ್ತು . ಸುಮಾರು 8 ವರ್ಷಗಳ ಹಿಂದೆ , ಠಾಣೆಯಿಂದ ಚಾಸಾ-19 ರವರು ಕರೆ ಮಾಡಿ ಕಳ್ಳತನ ಪ್ರಕರಣವೊಂದರಲ್ಲಿ ಪಂಚರಾಗಿ ಬಂದು ಸಹಕರಿಸಬೇಕೆಂದು ಕೋರಿಕೊಂಡಿರುತ್ತಾರೆ . ಆದರಂತೆ ನಾನು ಪೊಲೀಸ್ ಠಾಣೆಗೆ ಹೋಗಿರುತ್ತೇನೆ . ಆರೋಪಿಯ ಮನೆಗೆ ಮಹಜರ್ ಮಾಡುವ ಸಲುವಾಗಿ ಠಾಣೆಯಿಂದ ಹೋಗಿರುತ್ತೇವೆ. ಆರೋಪಿಯ ಮನೆಗೆ ಹೋದ ಸಂದರ್ಭದಲ್ಲಿ, ಆರೋಪಿಯ ಆತನ ಮನೆಯ ಕೊಟ್ಟಿಗೆಯಲ್ಲಿ ಮೊಬೈಲ್ ಹಾಗೂ ಬಂಗಾರದ ಕರಿಮಣಿ ಸರ , ಉಂಗುರಗಳು , ಚೈನ್ ಈ ಆಭರಣಗಳನ್ನು ಆರೋಪಿ ತೋರಿಸಿ ಕೊಟ್ಟಿರುತ್ತಾರೆ . ನಂತರ ಪೊಲೀಸರು ಮಧ್ಯಾಹ್ನ 12-30 ರಿಂದ 1-30 ಗಂಟೆಯವರೆಗೆ ಜರುಗಿಸಿರುತ್ತಾರೆ . ಸದರಿ ಸಮಯದಲ್ಲಿ ಚಾಸಾ-10 ರವರೂ ಕೂಡ ಹಾಜರಿರುತ್ತಾರೆ . ಸದರಿ ಸ್ವತ್ತು ಸ್ವಾಧೀನತಾ ಮಹಜರನ್ನು ಸಾಕ್ಷಿ ನೋಡುತ್ತಿದ್ದು , ಅದನ್ನು ನಿಪಿ-4 ಎಂದು , ಸಾಕ್ಷಿಯ ಸಹಿಯನ್ನು ನಿಪಿ-4(ಎ) ಎಂದು ಗುರುತಿಸಲಾಯಿತು .

ಆ ಸಮಯದಲ್ಲಿ ಪೊಲೀಸರು ನನ್ನ ಹೇಳಿಕೆಯನ್ನು ಪಡೆದುಕೊಂಡಿರುತ್ತಾರೆ . ನಿಪಿ-4 ನ್ನು ತಯಾರಿಸಿದ ಸ್ಥಳ ಇರುವ ಫೋಟೋವನ್ನು ನೋಡಿ ಸಾಕ್ಷಿ ಗುರುತಿಸಿದ ಮೇರೆಗೆ ಸದರಿ ಫೋಟೋವನ್ನು ನಿಪಿ-5 ಎಂದು ಗುರುತಿಸಲಾಯಿತು . ಆರೋಪಿಯನ್ನು ನೋಡಿದರೆ ಗುರುತಿಸಬಲ್ಲೆನು. ಸಾಕ್ಷಿ ನಿಪಿ-3 ರಲ್ಲಿ ಇರುವ ಆಭರಣಗಳನ್ನು ನೋಡಿ ಸಾಕ್ಷಿ ಗುರುತಿಸಿರುತ್ತಾರೆ .

*(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ವಿಚಾರಣೆ ಮಾಡಲು ಮಾನ್ಯ ಸ ಸ ಅ ರವರು ಅನುಮತಿ ಕೋರಿದ್ದು ಅನುಮತಿ ನೀಡಲಾಯಿತು.)*

ಪಾಟೀ ಸವಾಲುಃ ಮಾನ್ಯ ಸ ಸ ಅ ರವರಿಂದಃ

ಮಹಜರನ್ನು ದಿಃ 18-11-2017 ರಂದು ಉರ್ಕಿ ಎಂಬಲ್ಲಿ ಮನೆ ನಂ. 1-4(1) ಎಂಬಲ್ಲಿ ಮಾಡಿರುತ್ತಾರೆ ಎಂದರೆ ಸರಿ . ಆರೋಪಿ ಬೇರೆ ಬೇರೆ ಪ್ರಕರಣಗಳಲ್ಲಿ ಕಳ್ಳತನ ಮಾಡಿದ ಜೋಮಾಲೆ , ಬಳೆಗಳು , ಉಂಗುರು ಹಾಗೂ ನೆಕ್ಲೇಸುಗಳನ್ನೂ ಸಹ ಸ್ವಾಧೀನ ಪಡಿಸಿಕೊಂಡಿರುತ್ತಾರೆ ಎಂದರೆ ಸರಿ .

ಪಾಟೀಸವಾಲುಃ ಆರೋಪಿ ಪರ ವಕೀಲರಾದ ಶ್ರೀ ಎಸ್.ಎಸ್.ಡಿ ರವರಿಂದಃ

ಆರೋಪಿ ಪರ ವಕೀಲರು ಸಿ.ಸಿ. ನಂ. 201/2018 ರಲ್ಲಿ ಚಾಸಾ-6 , ಪ್ರಾಸಾ-3 (ಈ ಪ್ರಕರಣದ ಚಾಸಾ-6, ಪ್ರಾಸಾ-4) ಮಾಡಿರುವ ಪಾಟೀಸವಾಲನ್ನು ಅಳವಡಿಸಿಕೊಂಡಿರುತ್ತಾರೆ. ಆದ್ದರಿಂದ ಸಿ.ಸಿ. ನಂ. 201/2018 ರಲ್ಲಿಯ ಪಾಟೀಸವಾಲನ್ನು ಈ ಪ್ರಕರಣದಲ್ಲಿ ಪಾಟೀಸವಾಲನ್ನು ಪ್ರಕರಣದ ತೀರ್ಮಾನದ ಸಂದರ್ಭದಲ್ಲಿ ನ್ಯಾಯಾಲಯವು ಪರಿಗಣನೆಗೆ ತೆಗೆದುಕೊಳ್ಳಲಾಗುವುದು .

(ಮರುವಿಚಾರಣೆ ಇಲ್ಲ.)

ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು .

ಓದಿ   ಹೇಳಿ  ಕೇಳಿ ಸರಿ ಇದೆ

ಸಹಿ/-

ವ್ಯ ನ್ಯಾ.ಮತ್ತು ಪ್ರ.ದ.ನ್ಯಾದಂ.
ಮೂಡಬಿದಿರೆ